# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

Spl.C.29/2021

C.W.6
P.W. 6

<u>ದಿನಾಂಕಃ 13-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>

| | |
|---|---|
| ಹೆಸರು | ಃ ರಮೇಶ್ |
| ತಂದೆಯ ಹೆಸರು | ಃ ನರಸಿಂಹಮೂರ್ತಿ |
| ವಯಸ್ಸು | ಃ 38 ವರ್ಷ |
| ಉದ್ಯೋಗ | ಃ ವ್ಯವಸಾಯ |
| ವಾಸ | ಃ ದೊಡ್ಡಸಾರಂಗಿ |

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಅದರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿಪಿ-18 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-18(B) ಎಂದು ಗುರುತಿಸಲಾಯಿತು.

2) ದಿ 24.08.2020 ರಂದು ಸುಮಾರು 10 ಗಂಟೆ ಸಮಯದಲ್ಲಿ ತುಮಕೂರು ಜಿಲ್ಲಾಸರ್ಕಾರಿ ಆಸ್ಪತ್ರೆಯಲ್ಲಿ ಸಹಿ ಮಾಡಿರುತ್ತೇನೆ . ಅಂಜಲಿಯವರ ಮೃತ ದೇಹ ಆಸ್ಪತ್ರೆಯ ಶವಗಾರದಲ್ಲಿ ಇತ್ತು. ಸ್ಥಳದಲ್ಲಿ ತಹಶೀಲ್ದಾರ್ ಮತ್ತು ಪೊಲೀಸರು

ಇದ್ದರು. ತಹಶೀಲ್ದಾರ್ ಅಥವಾ ಪೊಲೀಸರೋ ಯಾರೋ ಒಬ್ಬರು ಸಹಿ ಮಾಡು ಎಂದು ಕೇಳಿದ್ದರಿಂದ ಸಹಿ ಮಾಡಿರುತ್ತೇನೆ . ಮೃತ ಅಂಜಲಿ ದೊಡ್ಡಸಾರಂಗಿ ಗ್ರಾಮದವರು. ಆಕೆಯ ಮೃತದೇಹವು ಊದಿಕೊಂಡು ವಾಸನೆ ಬರುತ್ತಿತ್ತು . ಶವತನಿಖೆ ಮಾಡುವ ಸಮಯದಲ್ಲಿ ಮೃತೆ ಅಂಜಲಿಯನ್ನು ಯಾರೋ ದೃಷ್ಕರ್ಮಿಗಳು ರೇಪ್ ಮಾಡಿರಬಹುದೆಂದು ಹೇಳಿದರು. ಶವಗಾರದಲ್ಲಿ ನಾನು ನೋಡಿದ ಅಂಜಲಿಯ ಮೃತ ದೇಹ ಈಗ ಪೋಟೋದಲ್ಲಿ ಇರುವುದೇ ಆಗಿರುತ್ತದೆ.

<u>ಪಾಟೀ ಸವಾಲುಃ **1** ಮತ್ತು **4** ನೇ ಆರೋಪಿಗಳ ಪರ ಶ್ರೀಬಿ ಕೆ ಪಿ ಎಸ್ ವಕೀಲರಿಂದಃ</u>

3) ಪೊಲೀಸರ ಕೋರಿಕೆಯ ಮೇರೆಗೆ ಸದರಿ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ ಅಂದರೆ ಸರಿ . ಸದರಿ ದಾಖಲೆಯಲ್ಲಿ ಯಾವ ವಿಷಯಗಳು ಟೈಪ್ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ ಅಂದರೆ ಸರಿ. ಅಂಜಲಿ ಯಾವ ವಿಧವಾಗಿ ಮೃತಪಟ್ಟಳು ಎಂದು ನನಗೆ ವೈಯುಕ್ತಿಕವಾಗಿ ಮಾಹಿತಿ ಗೊತ್ತಿಲ್ಲ ಅಂದರೆ ಸರಿ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರು ಸಹ ಪೊಲೀಸರ ಕೋರಿಕೆಯ ಮೇರೆಗೆ ಈ ದಿನ ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿ.

( ಉಳಿದ ಆರೋಪಿಗಳ ಪರ ವಕೀಲರು 1. ಮತ್ತು 4 ನೇ ಆರೋಪಿಗಳ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಆಳವಡಿಸಿಕೊಳ್ಳಲು ಕೋರಿದ್ದಾರೆ.)

- ಮರುವಿಚಾರಣೆ ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು